# ಹುಮಾಯೂನ್

## ನಾಸಿರುದ್ದಿನ್ ಮಹಮ್ಮದ್ ಹುಮಾಯೂನ್. (1530 – 1556)

1. ಪೀಠಿಕೆ
2. ಪ್ರಾರಂಬಿಕ ಜೀವನ,
3. ಸಿಂಹಾಸರೋಹಣ
4. ಆರಂಬಿಕ ಸಮಸ್ಯೆಗಳು
5. ಸೈನಿಕ ಸಾಧನೆಗಳು.
6. ಸೈನಿಕ ವಿಫಲತೆಗಳು.
7. ವಿಫಲತೆಗೆ ಕಾರಣಗಳು.
8. ರಾಜಬ್ರಷ್ಟನಾಗಿ ಅಲೇಮಾರು ಜೀವನ.
9. ಭಾರತದ ಸಾಮ್ರಾಜ್ಯದ ಪುನಃರ ಸಂಪಾದನೆ.
10. ಕೊನೆಯದಿನಗಳು ಮತ್ತು ಮರಣ.
11. ವ್ಯಕ್ತಿತ್ವ ಮತ್ತು ವಿಮರ್ಶೆ.

**1. ಪೀಠಿಕೆ**

ಹುಮಾಯೂನ್ ಮೊಘಲ್ ಸಾಮ್ರಾಜ್ಯದ ಎರಡನೇ ಬಾದ್‌ಷಹಾ. ಅತ್ಯಂತ ಸಂದಿಗ್ಧ ಸಮಯದಲ್ಲಿ ಸಿಂಹಾಸನವನ್ನೇರಿದ್ದನು. ಸಹೋದರರ ವಿಶ್ವಾಸ ದ್ರೊಹ, ಅಫಘನರ ಮತ್ತೆ ಅಧಿಪತ್ಯೆ ಸ್ಥಾಪಿಸುವ ಪ್ರಯತ್ನಗಳು - ಬಾಬರನಂತೆ ಎದೆಗಾರಿಕೆ ಇರದ ಸೌಮ್ಯ ಸ್ವಭಾವದ ಹುಮಾಯೂನನಿಗೆ ದುಸ್ತರವಾಯಿತು. ಅವನ ವೈಯಕ್ತಿಕ ದೌರ್ಬಲ್ಯಗಳು ಅವನನ್ನು ಸಾಮ್ರಾಜ್ಯವನ್ನು ಕಳೆದುಕೊಳ್ಳುವಂತೆ ಮಾಡಿತು. ಹೀಗೆ ಹುಮಾಯೂನನ ಜೀವನ ಪ್ರಯಾಣವು ಕೂತಹಲಕಾರಿಯಾದ ಸಫಲತೆ ಮತ್ತು ವಿಫಲತೆಯಿಂದ ರೊಮಾಂಚನಕಾರಿಯಾಗಿದೆ. “ಹುಮಾಯೂನ್ ” ಈ ಹೆಸರಿನ ಅರ್ಥ ಅದೃಷ್ಟವಂತ,

**2. ಪ್ರಾರಂಬಿಕ ಜೀವನ,**

ಹುಮಾಯೂನ್ ಕ್ರಿ. ಶ. 1508 ರ ಮಾರ್ಚ 6 ರಂದು ಕಾಬೂಲಿನಲ್ಲಿ ಜನಿಸಿದನು. ಅವನ ತಾಯಿ “ಮಹೀಮ್ ಬೇಗಂ ” ಬಾಬರನ ನಾಲ್ಕು ಮಕ್ಕಳಲ್ಲಿ ಇವನು ಹಿರಿಯ ಮಗನಾಗಿದ್ದನು. ಕಾಮ್ರಾನ್, ಅಸ್ಕಾರಿ, ಮತ್ತು ಹಿಂಡಾಲ್ ಇವನ ಮಲ ಸಹೋದರರಾಗಿದ್ದರು. ಬಾಬರನು ತನ್ನ ಮಕ್ಕಳ ಶಿಕ್ಷಣಕ್ಕಾಗಿ ಅನೇಕ ಶ್ರೇಷ್ಠ ಉಸ್ತಾದರನ್ನು ನೇಮಕ ಮಾಡಿದ್ದನು. ಅವರಲ್ಲಿ ಮೌಲಾನಾ ಮಸ್ಲಿವುದ್ದಿನ್ ರೂಹಾಲ್ಲಾ ಶ್ರೇಷ್ಠ ಉಸ್ತಾದನಾಗಿದ್ದನು. ಹುಮಾಯೂನ್ ಪರ್ಶಿಯನ್, ಅರೇಬಿಕ್, ತುರ್ಕಿ ಭಾಷೆಗಳನ್ನು ಮತ್ತು ತತ್ವಶಾಸ್ತ್ರ, ಗಣಿತ, ಖಗೋಳಶಾಸ್ತ್ರಗಳಲ್ಲಿ ಪರಿಣಿತ ಪಡೆದನು. ಕುದರೆ ಸವಾರಿ, ಕತ್ತಿವರೆಸೆ, ಬೇಟೆಯಾಡುವದು, ಅವನ ಆಶಕ್ತಿಗಳಾಗಿದ್ದವು.

ಬಾನರನು ಹುಮಾಯೂನನ್ನು ಕ್ರಿ. ಶ. 1528 ರಲ್ಲಿ ಬದಾಕ್ಷಾನದ ಆಡಳಿತಾಧಿಕಾರಿಯಾಗಿ ನೇಮಕ.

ಕ್ರಿ, ಶ 1526 ರಲ್ಲಿ ನಡೆದ ಮಿಲಾಯತ್ ಮತ್ತು ಪಾಣಿಪತ್ ಕಾಳಗದಲ್ಲಿ ತಂದೆಗೆ ಸಹಾಯ.

ಪಾಣಿಪತ್ ಕಾಳಗದ ವಿಜಯದ ನಂತರ ಆಗ್ರಾ ಕೋಟೆ ಮತ್ತು ಖಜಾನೆ ವಶಪಡಿಸಿಕೊಂಡಿದ್ದು

ಬಾಬರನ ಜೊತೆ ಖಾನವ, ಚಾಂದೇರಿ, ಘೊಗ್ರಾ ಕಾಳಗದಲ್ಲಿ ಭಾಗವಹಿಸಿದ್ದು. ಇವನ ಆರಂಬಿಕ ಸಾಧನೆಗಳಾಗಿದ್ದವು.

**3. ಸಿಂಹಾಸರೋಹಣ**

ಹುಮಾಯೂನ್‌ನು ತನ್ನ ತಂದೆಯ ಕೊನೆಯ ಇಚ್ಚೆಯಂತೆ ಬಾಬರನ್ನು ಮರಣ ಹೊಂದಿದ ಮೂರುದಿನಗಳ ನಂತರ 1530 ಡಿಸೆಂಬರ 29 ರಂದು ಆಗ್ರಾದಲ್ಲಿ ಸಿಂಹಾಸನವನ್ನು ಆಲಂಕರಿಸಿದನು. ಆಗ್ರಾ ಮತ್ತು ದೆಹಲಿಯಲ್ಲಿಯ ಎಲ್ಲಾ ಮಸಿದಿಗಳಲ್ಲಿ ಖುತ್ಬಾ

ಪಠಿಸಲಾಯಿತು. ಆಧಿಕಾರಿಗಳಗೆ, ಸೈನಿಕರಿಗೆ, ಜನಪ್ರತಿನಿಧಿಗಳಿಗೆ, ಮತ್ತು ವಿದ್ವಾಂಸರಿಗೆ ಪದವಿ ಪಾರಿತೋಷಕಗಳನ್ನು ನೀಡಿ ಗೌರವಿಸಲಾಯಿತು. ಬಡವರಿಗೆ ದೊಡ್ಡ ಪ್ರಮಾಣದಲ್ಲಿ ದಾನ ಮಾಡಲಾಯಿತು.

**4. ಆರಂಬಿಕ ಸಮಸ್ಯೆಗಳು**

**1. ಅಸ್ಥಿರ ಮತ್ತು ದುರ್ಬಲ ವಿಶಾಲವಾದ ಸಾಮ್ರಾಜ್ಯ**

ಹುಮಾಯೂನ್‌ನು ಕಾಬೂಲನಿಂದ ಬಂಗಾಳದವರೆಗಿನ ವಿಶಾಲವಾದ ಸಾಮ್ರಾಜ್ಯದ ಬಾದಷಹಾನಾಗಿದ್ದನು. ಆದರೆ ಇವನ ತಂದೆ ವಿಶಾಲವಾದ ಸಾಮ್ರಾಜ್ಯದ ನಿಯಂತ್ರಣಕ್ಕೆ ಸೂಕ್ತ ಮತ್ತು ಭದ್ರವಾದ ಆಡಳಿತ ನೀಡಿರಲಿಲ್ಲ. ಬಾಬರನ ಆಕಾಲ ಮರಣದಿಂದಾಗಿ ಮೂಲೆ ಸೇರಿದ್ದ ಅವನ ವೈರಿಗಳು ಮತ್ತೆ ತಮ್ಮ ಸಾಮ್ರಾಜ್ಯವನ್ನು ಮರಳಿ ಪಡೆಯಲು ಪ್ರಯತ್ನ ಪಡುತ್ತಿದ್ದರು. ಅಲ್ಲದೆ ಹುಂಅಯೂನನಿಗೆ ಬಾಬರಂತೆ ರಾಜಕೀಯ ಚತುರತೆಗಳು ಗೊತ್ತಿರಲಿಲ್ಲ ಇದರಿಂದಾಗಿ ವಿಶಾಲವಾದ ಸಾಮ್ರಾಜ್ಯವು ಅಸ್ಥಿರವಾಗಿತ್ತು.

**2. ಸೈನ್ಯದಲ್ಲಿ ನಿಷ್ಠೇಯ ಅಭಾವ.**

ಬಾಬರನು ಸಂಘಟಿಸಿದ ಮೊಘಲ್ ಸೈನ್ಯದಲ್ಲಿ ಪರ್ಶಿಯನ್, ಉಜ್ ಬೇಗ್, ತುರ್ಕಿ, ಮಂಗೋಲ್ ಮತ್ತು ಅಫಘನ್ ಜನಾಂಗಗಳಿಂದ ಕೂಡಿತ್ತು. ದೂರದ ಪ್ರದೇಶದಿಂದ ಬಂದವರಾಗಿದ್ದರು. ಬಾಬರನಿಗೆ ವಿಭಿನ್ನ ಗುಂಪಿನ ಮತ್ತು ವಿವಿಧ ಜನಾಂಗ ಸೈನ್ಯವನ್ನು ಅಂಕೀತದಲ್ಲಿಟ್ಟುಕೊಳ್ಳವ ಸಾಮರ್ಥ್ಯ ಇತ್ತು. ಆದರೆ ಹುಮಾಯೂನನಿಗೆ ಆ ಶಕ್ತಿ ಇರಲಿಲ್ಲ. ಇದರಿಂದಾಗಿ ಸೈನ್ಯದಲ್ಲಿ ರಾಜನಿಷ್ಠೆಯ ಕೊರತೆ ಎದ್ದು ಕಾಣುತಿತ್ತು.

**3. ಕೃತಘ್ನರಾದ ಸಹೋದರರು.**

ಬಾಬರನ ಅಂತಿಮ ಆಸೆಯಂತೆ ಹುಮಾಯೂನನು ತನ್ನ ಸಹೋದರರಾದ ಕಾಮ್ರನ್ ಹಿಂಡಾಲ ಮತ್ತು ಅಸ್ಕರಿಗೆ ವಿಶಾಲವಾದ ಸಾಮ್ರಾಜ್ಯದ ಆಡಳಿತದ ಜವಬ್ದಾರಿಯನ್ನು ಹಂಚಿ ಕೊಟ್ಟಿದ್ದನು. ಆದರೆ ಅದಕ್ಕೆ ತೃಪ್ತರಾಗದ ಈ ಸಹೋದರರು ಹೆಚ್ಚಿ ಬೇಡಿಕೆಗಳನ್ನು ಮುಂದಿಡುತ್ತಿದ್ದರು. ಅಲ್ಲದೆ ತಮಗೊಪ್ಪಿಸಿದ ಪ್ರಾಂತಗಳ ಆದಾಯದ ಕೇಂದ್ರದ ಪಾಲನ್ನು ನೀಡಿದಿಲ್ಲಾ. ಇದರಿಂದಾಗಿ ಖಜಾನೆಗೆ ತೊಂದರೆಯಾಗಿತ್ತು. ಹುಮಾಯೂನನ ಕಷ್ಟ ಕಾಲದಲ್ಲಿ ಯಾವಬ್ಬ ಸಹೋದರನು ಸಹಾಯಕ್ಕೆ ಮುಂದೆ ಬರಲಿಲ್ಲ

**4. ಸಂಬಂದಿಗಳಾದ ಮಿರ್ಜಾಗಳ ವಿರೋಧ.**

ಹುಮಾಯೂನ್‌ನ ಸಹಾಯ ಸಹಕಾರ ಪಡೆದ ಇವನ ಸಂಬಂದಿಗಳಾದ ಮಿರ್ಜಾಗಳು ಶ್ರೀಮಂತರಾದರೆ ಹೊರತು, ಅವನ ಆಡಳಿತಕ್ಕಗಾಲಿ, ಯುದ್ಧಗಳಿಗಾಗಲಿ ಸಹಕಾರ ನೀಡಲಿಲ್ಲ. ಅಷ್ಟೇ ಅಲ್ಲದೇ ತಾವೇ ಬಾದಷಹಾ ಆಗಬೇಕೆಂಬ ಬಯಕೆಯಿಂದ ಹುಮಾಯೂನನ್ನು ವಿರೋಧಿಸಲಾರಂಬಿಸಿದರು.

**5. ಆರ್ಥಿಕ ಸಮಸ್ಯೆಗಳು.**

ಬಾಬರನು ಮಾಡಿದ ಸತತ ಯುದ್ಧಗಳಿಂದ ಮತ್ತು ಸಹೋದರರು ಸಾಮ್ರಾಜ್ಯದ ಆಡಳಿತದ ಆದಾಯವನ್ನು ಕೊಡದೇ ಇದ್ದರಿಂದ, ಹುಮಾಯೂನನ ವಿಲಾಸ ಖರ್ಚುಗಳಿಂದ, ಅನಾವಶ್ಯಕ ಮತ್ತು ಪರಿಣಾಮ ರಹಿತ ಯುದ್ಧಗಳಿಂದ ಖಜಾನೆಯು ಬರಿದಾಗಿ ಸಾಮ್ರಾಜ್ಯ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿತ್ತು.

**6. ಅಫಘನರ ಪುನಃರ್ ಸಂಘಟನೆ ಮತ್ತು ಆಕ್ರಮಣದ ಭಯ**

ಬಾಬರನ ಮರಣದ ನಂತರ ಇಬ್ರಾಹಿಂ ಲೋದಿಯ ಸಹೋದರ ಮಹಮ್ಮದ್ ಲೋದಿ ಮತ್ತು ಅವನ ಸಂಗಡಿಗರು ಸೆರೆಮನೆಯಿಂದ ತಪ್ಪಿಸಿಕೊಂಡು ಮತ್ತೆ ಚೇತರಿಸಿಕೊಳ್ಳುತ್ತಿದ್ದರು. ಮಹಮ್ಮದ್ ಲೋದಿ ಮತ್ತ ಬಲವಾದ ಆಫಘನ್ನ ಸೈನ್ಯವನ್ನು ಸಂಘಟಿಸಿ ಮೊಘಲರ ಗಡಿ ಪ್ರದೇಶಗಳನ್ನು ವಶಪಡಿಸಕೊಳ್ಳಲಾರಂಬಿಸಿದನು. ದೆಹಲಿಯ ಮೇಲೆ ದಾಳಿ ಮಾಡುವ ಪ್ರಯತ್ನದಲ್ಲಿದ್ದನು

**7. ಗುಜರಾತಿನ ಬಹಾದ್ದೂರ ಷಹಾನ ಬೆಳವಣಿಗೆ**

ಗುಜರಾತ ರಾಜ್ಯವು ಅನೇಕ ರೇವು ಪಟ್ಟಣಗಳಿಂದ ಶ್ರೀಮಂತರಾಜ್ಯವಾಗಿತ್ತು. ಅಲ್ಲಿಯ ಸುಲ್ತಾನ ಬಹಾದ್ದೂರ ಷಾ **ಮಹತ್ವಕಾಂಕ್ಷಿಯಾಗಿದ್ದು ದೆಹಲಿಯನ್ನು ಆಳುವ ಬಯಕೆಯನ್ನು ಹೊಂದಿದ್ದು ಆಕ್ರಮಣದ ಸಿದ್ದತೆಯಲ್ಲಿದ್ದನು.**

**8. ಆಲಂಖಾನನ ದಾಳಿಯ ಭೀತಿ.**

ದೆಹಲಿ ಇಬ್ರಾಹಿಂ ಲೋದಿಯ ಚಿಕ್ಕಪ್ಪ ಆಲಂಖಾನ ಅನೇಕ ಅಫಘನ್ ಸರದಾರರನ್ನು ಸಂಘಟಿಸಿ ದೆಹಲಿಯ ಮೇಲೆ ದಾಳಿ ಮಾಡಲು ಸರ್ವಸಿದ್ದನಾಗಿದ್ದನು.

**9. ಶೇರಖಾನನ ಮಹತ್ವಕಾಂಕ್ಷೆ**

ಸಸರಾಮದ ಚಿಕ್ಕ ಜಹಗೀರುದಾರ ಶೇರಖಾನ ಅತ್ಯಂತ ಚಾಣಕ್ಷ ಮತ್ತು ಚತುರ ರಾಜಕೀಯ ಮುತ್ಸದ್ಧಿಯಾಗಿದ್ದನು. ಇವನು ಬಹುಬೇಗನೆ ಬೆಳದು ಚುನಾರಕೋಟೆಯ ಒಡೆಯನಾಗಿದ್ದನು. ಅಪಾರ ಪ್ರಮಾಣದ ಗುಪ್ತನಿಧಿ ದೊರೆತ್ತಿದ್ದರಿಂದ ದೊಡ್ಡ ಸೈನ್ಯವನ್ನು ಸಂಘಟಿಸಲಾರಂಬಿಸಿದನು. ಮೊಘಲರ ಸೇವೆಯಲ್ಲಿದ್ದು ಸೈನ್ಯದ ಬಲ ಮತ್ತು ದುರ್ಬಲಗಳನ್ನು ಚನ್ನಾಗಿ ಅರಿತವನಾಗಿದ್ದನು. ಮೊಘಲರ ಸೈನ್ಯವನ್ನು ಸೋಲಿಸಬೇಕಾದರೆ ಅವರಂತೆ ಬಲಯುತವಾದ ಫಿರಂಗಿ ಪಡೆಯನ್ನು ಕಟ್ಟುವದರಲ್ಲಿ ನಿರತನಾಗಿದ್ದನು.

**5.) ಸೈನಿಕ ಸಾಧನೆಗಳು.**

ಹುಮಾಯೂನ್‌ನು ಪರಾಕ್ರಮಿಯಾಗಿದ್ದರು ಬಾಬರನಂತೆ ದೃಡ ನಿರ್ಧಾರದ ಕೊರತೆ ಕಾಣುತ್ತಿತ್ತು. ಯುದ್ದದಲ್ಲಿ ಇರಬೇಕಾದ ಮುಂಜಾಗೃತೆ, ಸಮಯ ಪರಿಪಾಲನೆ, ವೈರಿಗಳ ಬಗ್ಗೆ ಎಚ್ಚರಿಕೆ ಮುಂತಾದ ಯಾವ ಗುಣಗಳು ಹುಮಾಯೂನ್‌ನಲ್ಲಿ ಇರಲಿಲ್ಲ. ಇದರಿಂದಾಗಿ ಹುಮಾಯೂನನ ಸೈನಿಕ ಸಾಧನೆಗಳು ಸಫಲತೆ ಮತ್ತು ವಿಫಲತೆಗಳಿಂದ ಕೂಡಿದೆ.

- **ಕಾಲಿಂಜರ ಕೋಟೆಯ ಮೇಲೆ ದಂಡಯಾತ್ರೆ.**

ಕಾಲಿಂಜರ ಇದು ಬುಂದೇಲಖಂಡದ ರಾಜ್ಯದ ರಾಜಧಾನಿಯಾಗಿತ್ತು. ಇದನ್ನು ರಜಪೂತ ದೊರೆ ರಾಜಾ ಪ್ರತಾಪರುದ್ರದೇವನು ಆಳುತ್ತಿದ್ದನು.

ರಾಜಾ ಪ್ರತಾಪ ರುದ್ರದೇವನು ಸರೆಮನೆಯಿಂದ ತಪ್ಪಿಸಿಕೊಂಡ ಇಬ್ರಾಹಿಂ ಲೋದಿಯ ಸಹೋದರ ಮಹಮ್ಮದ್ ಲೋದಿಗೆ ಸಹಾಯ ಮಾಡುತ್ತಿದ್ದಾನೆ ಮತ್ತು ಅವನ ಜೋತೆ ಸೇರಿ ದೆಹಲಿಯ ಮೇಲೆ ಆಕ್ರಮಣ ಮಾಡಬಹುದೆಂದು ಅಲ್ಲದೆ ರಜಪೂತರು ಮೊಘಲರ ವೈರಿಗಳೆಂದು ಪರಿಗಣಿಸಿ ಕಾಲಿಂಜರವನ್ನು ಮುತ್ತಿಗೆ ಹಾಕಿದನು. 6 ತಿಂಗಳ ಕಾಲ ಮುತ್ತಿಗೆಯಲ್ಲಿ ಕಾಲಹರಣ ಮಾಡಿದನು. ಆದರೆ ಇದೇ ಸಮಯದಲ್ಲಿ ಮಹಮ್ಮದ್ ಲೋದಿ ಮೊಘಲರ ಆಧೀನದಲ್ಲಿದ್ದ ಔದ ಮತ್ತು ಜಾನಪುರಗಳನ್ನು ವಶ ಪಡಿಸಿಕೊಂಡ ವಾರ್ತೆ ಕೇಳಿದ ಮೇಲೆ ರಾಜಾ ಪ್ರತಾಪ ರುದ್ರದೇವನ ಜೋತೆ ಸಾರ್ವಭೌಮತ್ವವನ್ನು ಒಪ್ಪುವ ಮತ್ತು ಕಪ್ಪು ಕಾಣಿಕೆ ಸ್ವೀಕರಿಸುವ ಒಪ್ಪಂದ ಮಾಡಿಕೊಂಡು ಹಿಂತೂರುಗಿದನು.

- **ಔದ ಮತ್ತು ಜಾನಪುರಗಳ ವಿಜಯ**

ಮಹಮ್ಮದ್ ಲೋದಿಯು ಬಿಹಾರ ಎಲ್ಲಾ ಅಫಘನ್ ರನ್ನು ಸಂಘಟಿಸಿ, ಮೊಘಲರ ಆಧೀನದಲ್ಲಿದ್ದ ಔದ ಮತ್ತು ಜಾನಪುರಗಳನ್ನು ವಶ ಪಡಿಸಿಕೊಂಡು ಹುಮಾಯೂನನ್ನು ಎದುರಿಸಲು ಸರ್ವಸಿದ್ದನಾಗಿದ್ದನು. ಹುಮಾಯೂನ್ ಕೂಡ ಅಪಾರ ಸೈನ್ಯದೊಡನೆ ಅವನನ್ನು ಎದುರಿಸಲು ಹೊರಟನು. ಉಭಯ ಸೈನ್ಯಗಳು ಕ್ರಿ.ಶ. 1532 ರಲ್ಲಿ ದೌರ ಎಂಬ ರಣಭೂಮಿಯಲ್ಲಿ ಸಂಧಿಸಿದವು ಇಲ್ಲಿ ನಡೆದ ಭೀಕರ ಯುದ್ಧದಲ್ಲಿ ಮಹಮ್ಮದ ಲೋದಿ ಸೋತು ರಾಜಭ್ರಷ್ಟನಾಗಿ ನೇಪಾಳಕ್ಕೆ ಪಲಾಯನ ಮಾಡಿದನು

- **ಚುನಾರಕೋಟೆಯ ಮೇಲೆ ಪ್ರಥಮ ದಾಳಿ ಕ್ರಿ.ಶ. 1532 ರಲ್ಲಿ**

ದೌರಕದನದ ವಿಜಯದಿಂದ ಪ್ರೇರೆಪಿತನಾದ ಹುಮಾಯೂನ, ಅದೇ ತಾನೆ ಉದಯನ್ಮುಖ ಅಫಘನ್ ನಾಯಕ ಶೇರಖಾನನ ಚುನಾರಕೋಟೆಯನ್ನು ಮುತ್ತಿಗೆ ಹಾಕಿದನು. 4 ತಿಂಗಳು ಮುತ್ತಿಗೆಯಲ್ಲಿ ಕಾಲಹರಣ ಮಾಡಿದನು. ಈ ಸಂದರ್ಬದಲ್ಲಿ ಗುಜರಾತಿನ ಬಹೂದ್ದರ ಷಾ ಮೊಘಲರ ಗಡಿ ಪ್ರದೇಶಗಳನ್ನು ಲೂಟಿ ಮಾಡುವದರಲ್ಲಿ ನಿರತನಾಗಿದ್ದನು. ಇವನ ದಾಳಿ ವಾರ್ತೆ ಕೇಳಿ ಅವಸರದಲ್ಲಿ

ಶೇರಖಾನನೊಡನೆ ಶಾಂತಿ ಒಪ್ಪಂದ ಮಾಡಿಕೊಂಡನು. ಶೆರಖಾನ ಮೊಘಲರ ಸಾರ್ವಭೌಮತ್ವ ಒಪ್ಪಿಕೋಳ್ಳಬೇಕು. ಮತ್ತು ವಾರ್ಷಿಕ ಕಪ್ಪುಕಾಣಿಕೆ ಸಲ್ಲಿಸಬೇಕು ಜೋತೆಗೆ ಯುದ್ಧ ನಷ್ಟವನ್ನು ನೀಡಬೇಂಬ ಕರಾರುಯೊಂದಿಗೆ ಹಿಂತೂರುಗಿದನು.

- **ಗುಜರಾತಿನ ಬಹಾದ್ದೂರಷಾ ನ ವಿರುದ್ಧ ಹೊರಾಟಗಳು**

ಹುಮಾಯೂನನು ಬಹಾದ್ದೂರಷಾನನ್ನು ಎದುರಿಸಲು ಬೃಹತ್ ಸೈನ್ಯದೊಂದಿಗೆ ಹೊರಟು ಸಾರಂಗಪುರದಲ್ಲಿ ಬಿಡಾರ ಹೂಡಿದನು. ಅದೇ ಸಮಯದಲ್ಲಿ ಬಹೂದ್ದರಷಾ ಮೇವಾಡದ ಚಿತ್ತೂಡ ಕೋಟೆಯನ್ನು ಮುತ್ತಿಗೆ ಹಾಕಿದ್ದನು. ಚಿತ್ತೊಡದ ರಾಣಿ ಕರ್ಣಾದೇವಿಯು ಹುಮಾಯೂನನಿಗೆ ರಾಖಿಯನ್ನು ಕಳುಹಿಸಿ ಸಹಾಯ ಮಾಡಬೇಕೆಂದು ರಾಯಭಾರಿಯನ್ನು ಕಳುಹಿಸಿದ್ದಳು. ಬಹಾದ್ದೂರಷಾ ಜೀಹಾದ್ ಯುದ್ಧ ಮಾಡುತ್ತಿದ್ದಾನೆಂದು ಹುಮಾಯೂನ್ ತಟಸ್ಥನಾದನು. ಮತ್ತು ವಿಲಾಸಜೀವನದಲ್ಲಿ ತೊಡಗಿದನು.
ಚಿತ್ತೊಡದ ವಿಜಯದಿಂದ ಉತ್ಸಾಹಗೊಂಡ ಬಹಾದ್ದೂರಷಾ ಹುಮಾಯೂನನ್ನು ಎದುರಿಸಲು ಸಿದ್ಧನಾದನು ಎರಡು ಸೈನ್ಯಗಳು ಕ್ರಿ. ಶ. 1535 ಮಾರ್ಚ 8 ರಂದು ಮಂಡೆಸೂರ ಎಂಬಲ್ಲಿ ಒಂದನ್ನೊಂದು ಸಂಧಿಸಿದವು. ಎರಡು ತಿಂಗಳು ನಡೆದ ಭೀಕರ ಯುದ್ಧದಲ್ಲಿ ಕೊನೆಗೂ ಬಹಾದ್ದೂರಷಾ ಸೋತು ಮಂಡುಕೋಟೆಗೆ ನಂತರದಲ್ಲಿ ಚಂಪನೇರು ಕೋಟೆಗೆ ಕೊನೆಗೆ ಕ್ಯಾಂಬೆಗೆ ಪಲಾಯನ ಮಾಡಿದನು. ಹುಮಾಯೂನನು ಸಹ ಅವನನ್ನು ಬೆನ್ನಟ್ಟಿ ಮಂಡುಕೋಟೆ ನಂತರದಲ್ಲಿ ಚಂಪನೇರು ಕೋಟೆ ಕೊನೆಗೆ ಕ್ಯಾಂಬೆ ಮತ್ತು ಸಂಪೂರ್ಣ ಗುಜರಾತನ್ನು ವಶಪಡಿಸಿಕೊಂಡನು. ಬಹಾದ್ದೂರಷಾ ಪೋರ್ಚಗೀಸರ ದೀವ್ ನಡುಗಡ್ಡೆಯಲ್ಲಿ ರಹಸ್ಯವಾಗಿ ಆಶ್ರಯ ಪಡೆದನು. ಗುಜರಾತ ಯುದ್ದದಿಂದ ಅಪಾರ ಸಂಪತ್ತನ್ನು ವಶಪಡಿಸಿಕೊಂಡು ಅಸ್ಕಾರಿಯನ್ನು ಗುಜರಾತದ ರಾಜ್ಯಪಾಲನಾಗಿ ನೇಮಿಸಿ ದೆಹಲಿಗೆ ಹಿಂತೂರುಗಿದನು.

**6.) ಸೈನಿಕ ವಿಫಲತೆಗಳು.**

**? ಗುಜರಾತ ರಾಜ್ಯವನ್ನು ಕಳೆದುಕೊಂಡಿದ್ದು**

ಹುಮಾಯೂನ ಬಹಾದ್ದೂರಷಾನನ್ನು ಸಂಪೂರ್ಣವಾಗಿ ಸದೆಬಡಿಯದೇ ದೆಹಲಿಗೆ ಹಿಂದಿರುಗಿದ್ದು ಅವನ ಪ್ರಮಾದವಾಗಿತ್ತು. ಇದರ ಪ್ರಯೋಜನ ಪಡೆದ ಅಡಗಿ ಕುಳಿತ್ತಿದ್ದ ಬಹಾದ್ದೂರ ಷಾನು ಮತ್ತೆ ಸೈನ್ಯವನ್ನು ಸಂಘಟಿಸಿ ಗುಜರಾತಿನ ಬರೋಡಕ, ಬೋರಚ್, ಕ್ಯಾಂಬೆಗಳನ್ನು ವಶಪಡಿಸಿಕೊಂಡು ಅಸ್ಕಾರಿಗೆ ಕಿರುಕುಳ ನೀಡಲಾರಂಬಿಸಿದನು. ದೆಹಲಿಯ ಮೇಲೆ ಆಶೆ ಇಟ್ಟುಕೊಂಡಿದ್ದ ಅಸ್ಕಾರಿ ಇದಕ್ಕೆ ತಕ್ಕ ಉತ್ತರ ನೀಡದೆ ಶಕ್ತಿ -ಸಾಮರ್ಥ್ಯ ಇದ್ದರೂ ಹೇಡಿಯಂತೆ ಶ್ರೀಮಂತ ಗುಜರಾತನ್ನು ಬಿಟ್ಟು ದೆಹಲಿಗೆ ಪಲಾಯನ ಮಾಡಿದನು. ಇಡೀ ಗುಜರಾತ ಮತ್ತೆ ಬಹದ್ದೂರಷಾನ ವಶವಾಯಿತು. ಆದರೆ ಅವನ ಅಕಾಲಿಕ ಮರಣದಿಂದಾಗಿ ಮುಂದೆ ಗುಜರಾತ ಮುಜಾಫರಿಗಳ ವಶವಾಯಿತು. ಹೀಗೆ ಅಸ್ಕಾರಿಯ ಹೇಡಿತನದಿಂದಾಗಿ ಹುಮಾಯೂನ್ ಗುಜರಾತನ್ನು ಕಳೆದುಕೊಂಡನು.

**? ಶೇರಖಾನನ ವಿರುದ್ಧದ ಹೊರಾಟಗಳು**

ಸಣ್ಣ ಸಸರಾಮದ ಜಹಗೀರುದಾರನಾಗಿದ್ದ ಶೇರಖಾನ ಬಹುಬೇಗನೆ ಬೆಳೆದು ಚುನಾರಕೋಟೆಯ ಒಡೆಯನಾಗಿದ್ದನು. ಬೆಳೆಯುವ ಪೈರನ್ನು ಮೊಳಕೆಯಲ್ಲಿಯೇ ಹೊಸಕಿಹಾಕುವದನ್ನು ಬಿಟ್ಟ ಹುಮಾಯೂನ್ ದೊಡ್ಡ ಪ್ರಮಾದ ಎದುರಿಸಬೇಕಾಯಿತು. ಮೊದಲ ಚುನಾರಕೋಟೆ ಮುತ್ತಿಗೆಯ ಸಮಯದಲ್ಲಿ ಮೊಘಲರ ಸಾರ್ವಭೌಮತ್ವ ಒಪ್ಪಿಕೊಂಡಂತೆ ನಾಟಕ ಮಾಡಿದ ಶೇರಖಾನ ಹುಮಾಯೂನ ಹಿಂದಿರುಗಿತ್ತಲೇ ಮತ್ತೆ ತನ್ನ ಶಕ್ತಿ ಸಾಮಾರ್ಥ್ಯ ಹೆಚ್ಚಿಸಕೊಳ್ಳಲಾರಂಬಿಸಿದನು. ಬಂಗಾಳದ ಮೇಲೆ ದಾಳಿ ಮಾಡಿ ಗೌರಪಟ್ಟಣವನ್ನು ವಶಪಡಿಸಿಕೊಂಡನು. ಮೊಘಲರಂತೆ ಶಕ್ತಿಶಾಲಿಯಾದ ಫಿರಂಗಿಪಡೆಯನ್ನು ಸಂಘಟಿಸಿದನು. ಮತ್ತು ಮೊಘಲರ ಗಡಿ ಪ್ರದೇಶಗಳನ್ನು ಲೂಟಿ ಮಾಡಿ, ಅದನ್ನು ವಶಪಡಿಸಿಕೊಳ್ಳುವ ಮುಖಾಂತರ ಹುಮಾಯೂನನ್ನು ನೇರವಾಗಿ ಕೆಣಕಿದನು.

**? ಚೌಸಾ ಕದನ 1539**

ಶೇರಖಾನನ ನಡುವಳಿಕೆ ಅವನ ಉದ್ಧಟತನಕ್ಕೆ ಉತ್ತರ ನೀಡಲು ಹುಮಾಯೂನ ಚುನಾರಕೋಟೆಯನ್ನು ಮುತ್ತಿಗೆ ಹಾಕಿದನು. ಅದೇ ಸಮಯದಲ್ಲಿ ಬಂಗಾಳದ ದಂಡೆಯಾತ್ರೆಯಲ್ಲಿದ್ದ ಶೇರಖಾನ ಗೌರಪಟ್ಟಣದಲ್ಲಿ ಅಡಗಿಸಟ್ಟ ಅಪಾರ ಸಂಪತ್ತು ಮತ್ತು

ಫಿರಂಗಿಗಳನ್ನು & ಸಿಡಿಮದ್ದಗಳನ್ನು ಬೇರಡೆ ಸಾಗಿಸಿ ಬರಿದಾದ ಕೋಟೆಯಲ್ಲಿ ಹುಮಾಯೂನನ ದೌರ್ಬಲ್ಯದ ವಸ್ತುಗಳಾದ ಅಫೀಮು, ಗಾಂಜಾ, ಸಾಕಷ್ಟು ಮದ್ಯವನ್ನು ಮತ್ತು ಅಪ್ಸರೆಯಂತಹ ಸುಂದರ ಸ್ತ್ರೀಯರನ್ನು ತುಂಬಿ, ಶೇರಖಾನನು ಗೌರದಲ್ಲಿ ಅಡಗಿರುವದಾಗಿ ಹುಮಾಯೂನನಿಗೆ ಸುದ್ದಿ ಮುಟ್ಟಿಸಿದನು.

ಚುನಾರಕೋಟೆಯ ಮುತ್ತಿಗೆಯಲ್ಲಿದ್ದ ಹುಮಾಯೂನನಿಗೆ ಶೇರಖಾನನು ಗೌರಕೋಟೆಯಲ್ಲಿರುವ ಸುದ್ದಿ ಮುಟ್ಟುತ್ತಲೆ ಗೌರಕೋಟೆಯನ್ನು ವಶಪಡಿಸಿಕೊಂಡನು. ಕೋಟೆಯ ಅರಮನೆಯನ್ನು ಹೊಕ್ಕು ಮದ್ಯ ಮದನಿಯರನ್ನು ಕಂಡ ಹುಮಾಯೂನ ಗೌರವನ್ನು "**ಜನ್ನಾತಾಬಾದ್**" ಎಂದು ಕರೆದು ತಾನು ಬಂದ ಕಾರ್ಯವನ್ನು ಮರೆತು ಸುರಪಾನ ಮತ್ತು ಐಶಾರಾಮದಲ್ಲಿ ಮಗ್ನನಾದನು. ಅವನ ಸೈನಿಕರು ಸಹ ಸಾಮ್ರಾಟನನ್ನೆ ಅನುಸರಿಸಿದರು. ಹೀಗೆ ಶೇರಖಾನ ರಚಿಸಿದ ಜಾಲದಲ್ಲಿ ಹುಮಾಯೂನ ಬಿದ್ದು ಸುಮಾರು ಎಂಟು ತಿಂಗಳು ಕಾಲಹರಣ ಮಾಡಿದನು.

ಇತ್ತ ಶೇರಖಾನ ದೆಹಲಿ ಮತ್ತು ಬಿಹಾರದ ಮದ್ಯ ಸಂಪರ್ಕಸಾಧನೆಗಳನ್ನು ಕಡಿದು, ಬನಾರಸ್, ಕನೋಜ್, ಜಾನಪೂರ,ಮತ್ತು ಔದಗಳನ್ನು ವಶಪಡಿಕೊಂಡು ಮೊಘಲರ ಫಿರಂಗಿಪಡೆಯನ್ನು ಸಂಪೂರ್ಣ ಹಾಳುಮಾಡಿದನು. ಮತ್ತು ಹುಮಾಯೂನನ ಮೇಲೆ ಯುದ್ಧ ಸಾರಿದನು.

ಕ್ರಿ ಶ. 1539 ರಲ್ಲಿ ಸಂಬವಿಸಿದ ಚೌಸಾ ಯುದ್ಧದಲ್ಲಿ ಹುಮಾಯೂನ್ ಸಂಪೂರ್ಣವಾಗಿ ಸೋತು, ಪ್ರಾಣ ರಕ್ಷಣೆಗಾಗಿ ನದಿಗೆ ಹಾರಿದನು.

ಅಲ್ಲಿರುವ ನಿಜಾಮನೆಂಬ ನಾವಿಕನ ಸಹಾಯದಿಂದ ಆಗ್ರಾಕೋಟೆಯನ್ನು ಸೇರಿದನು. ಹೀಗೆ ಹುಮಾಯೂನ ಚೌಸಾ ಕದನದಲ್ಲಿ ತನ್ನ ಸಂಪೂರ್ಣ ಸೈನ್ಯವನ್ನು ಕಳೆದುಕೊಂಡನು.

- **ಕನೋಜ ಯುದ್ದ 1540**

ಶೇರಖಾನನು ಚೌಸಾ ಕಾಳಗದ ವಿಜಯದ ನಂತರ "ಸುಲ್ತಾನ-ಎ-ಆದಿಲ್" ಎಂಬ ಬಿರುದನ್ನು ಧರಿಸಿ ಮೊಘಲರನ್ನು ಸದೆಬಡಿಯಲು ಅಪಾರ ಸೈನ್ಯದೊಡನೆ ಹೊರಟು ಕನೋಜದ ಹತ್ತಿರ ಗಂಗಾನದಿಯ ತೀರದ ಎತ್ತರವಾದ ಸ್ಥಳದಲ್ಲಿ ಬಿಡಾರ ಹೋಡಿದನು. ಅದೇ ರೀತಿ ಆಗ್ರಾ ಸೇರಿದ ಹುಮಾಯೂನ ತನ್ನೆಲ್ಲಾ ಸಹೋದರರ, ಬಂದುಗಳ ಮತ್ತು ಸರದಾರರ ಸಭೆಯನ್ನು ಕರೆದು ಶೇರಖಾನನನ್ನು ಎದುರಿಸಲು ಸಹಕಾರ ಕೋರಿದನು. ಹುಮಾಯೂನನು ತನ್ನ ಮಿತ್ರ ಭೈರಾಮ್‌ಖಾನನ ಜೋತೆ ಅಪಾರ ಸೈನ್ಯವನ್ನು ಸಂಗ್ರಹಿಸಿ ಶೇರಖಾನನನ್ನು ಎದುರಿಸಲು ಹೋರಟು ಕನೋಜದ ಹತ್ತಿರ ಗಂಗಾನದಿಯ ಬಲದಂಡೆಯ ತಗ್ಗಾದ ಪ್ರದೇಶದಲ್ಲಿ ಬಿಡಾರ ಬಿಟ್ಟನು. ಕ್ರಿ. ಶ. 1540 ರ ಮೇ ತಿಂಗಳಲ್ಲಿ ಯುದ್ಧ ಆರಂಭವಾದಾಗ ಭೀಕರ ಮಳೆಯಿಂದ ತಗ್ಗು ಪ್ರದೇಶದಲ್ಲಿದ್ದ ಮೊಘಲರಿಗೆ ಅಪಾರ ಹಾನಿ ಉಂಟಾಯಿತು. ಇದರಿಂದ ಇವನ ಸಹೋದರರು ಹೇದರಿ ರಣರಂಗದಿಂದ ಪಲಾಯನ ಮಾಡಿದರು. ಇದರಿಂದಾಗಿ ಮೊಘಲರ ಸೈನ್ಯದಲ್ಲಿ ಗೊಂದಲ ಉಂಟಾಯಿತು. ಶೇರಖಾನನ ಭೀಕರ ದಾಳಿಯಿಂದ ತತ್ತರಿಸಿದ ಮೊಘಲರ ಸೈನಿಕರು ರಣರಂಗದಿಂದ ಪಲಾಯನ ಮಾಡಿದರು. ಹೂಮಾಯೊನನು ಕೇವಲ ಒಂದು ರಾತ್ರಿ ಆಗ್ರಾದಲ್ಲಿದ್ದು ತನ್ನ ಪರಿವಾರ ಮತ್ತು ಖಜಾನೆಯೊಂದಿಗೆ ಲಾಹೋರವನ್ನು ಸೇರಿದನು. ಹೀಗೆ ದೆಹಲಿ ಸಾಮ್ರಾಜ್ಯವನ್ನು ಕಳೆದುಕೊಂಡನು.

**ವಿಫಲತೆಗೆ ಕಾರಣಗಳು.**

1. **ಹುಮಾಯೂನನ ಸ್ವಭಾವಗಳು. ;-** ಹುಮಾಯೂನ ವೀರಯೋಧನು, ಪರಾಕ್ರಮಿಯೂ ಆಗಿದ್ದನಾದರೂ ತನ್ನದೇ ಆದ ಅನೇಕ ದೌರ್ಬಲ್ಯಗಳನ್ನು ಹೊಂದಿದ್ದನು. ಯುದ್ಧದ ಸಮಯದಲ್ಲಿ ವಿಲಾಸ ಜೀವನ ನಡೆಸುವದು, ಹಿಡಿದ ಕಾರ್ಯ ಸಂಪೂರ್ಣ ಮಾಡದೇ ಇರುವದು, ದೃಡ ನಿರ್ಧಾರ ಕೈಗೊಳ್ಳದೇ ಇರುವದು, ಎಲ್ಲರನ್ನು ನಂಬುವದು, ಅತಿಯಾದ ಮದ್ಯ ಮತ್ತು ಮದನಿಯರ ಸಹವಾಸ, ಮುಂತಾದ ಆತನ ವ್ಯಯಕ್ತಿಕ ದೌರ್ಬಲ್ಯಗಳೆ ಅವನ ಅವನತಿಗೆ ಕಾರನವಾಯಿತು.

2. ಸಾಮ್ರಾಜ್ಯವನ್ನು ಸಹೋದರರಿಗೆ ಹಂಚಿದ್ದು ;- ತಂದೆಯ ಮರಣದ ನಂತರ ತನ್ನ ವಿಶಾಲವಾದ ಸಾಮ್ರಾಜ್ಯವನ್ನು ತನ್ನ ಸಹೋದರರಿಗೆ ಹಂಚಿದ್ದು ದೊಡ್ಡ ಪ್ರಮಾದವಾಗಿತ್ತು. ಕಾಮ್ರಾನನಿಗೆ ಕಂದಹಾರ, ಕಾಬೂಲನ್ನು ಅಸ್ಕಾರಿಗೆ ಸಂಭಾಲನ್ನು, ಹಿಂಡಾಲನಿಗೆ ಅಲ್ವರವನ್ನು ವಹಿಸಿಕೊಟ್ಟದ್ದು ಇದರಿಂದ ಕೇಂದ್ರ ಸರಕಾರಕ್ಕೆ ಆದಾಯ ಬರದೇ ಆರ್ಥಿಕ ಸಮಸ್ಯೆ ಉಂಟಾಯಿತು.

3. ಮೊಘಲರ ಸೈನ್ಯ ;- ಮೊಘಲ್ ಸೈನ್ಯದಲ್ಲಿ ಪರ್ಶಿಯನ್, ಉಜ್ ಬೇಗ್, ತುರ್ಕಿ, ಮಂಗೋಲ್ ಮತ್ತು ಅಫಘನ್ ಜನಾಂಗಗಳಿಂದ ಕೂಡಿತ್ತು. ವಿಭಿನ್ನ ಗುಂಪಿನ ಮತ್ತು ವಿವಿಧ ಜನಾಂಗ ಸೈನ್ಯವನ್ನು ಅಂಕೀತದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹುಮಾಯೂನನಿಗೆ ಇರಲಿಲ್ಲ. ಇದರಿಂದಾಗಿ ಸೋಲಿನ ಸುಳಿವು ಕಂಡಕೋಡಲೇ ಸೈನ್ಯವು ಪಲಾಯನ ಮಾಡುತ್ತಿತ್ತು. ಸೈನಿಕರನ್ನು ಹುರಿದುಂಬಿಸಿ, ಚೈತನ್ಯ ಶೀಲರನ್ನಾಗಿ ಉತ್ಸಾಹಿಗಳನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಇವನಿಗಿರಲಿಲ್ಲ ಈ ರೀತಿಯ ಸೈನಿಕ ಅಸಮರ್ಥತೆಯೂ ಅವನ ವಿಫಲತೆಗೆ ಕಾರಣವಾಯಿತು.

4. ಸಹೋದರರ ಅವಿಶ್ವಾಸ ;- ಹುಮಾಯೂನನು ತನ್ನ ತಂದೆಯ ಕೊನೆಯ ಉಪದೇಶದಂತೆ ತನ್ನೆಲ್ಲ ಸಹೋದರರನ್ನು ಅತ್ಯಂತ ಪ್ರೀತಿ ಮತ್ತು ವಿಶ್ವಾಸದಿಂದ ಕಾಣಲಾರಂಬಿಸಿದನು. ಸಾಮ್ರಾಜ್ಯದ ಭಾಗಗಳ ಆಡಳಿತವನ್ನು ನೋಡಿಕೊಳ್ಳಲು ತನ್ನ ಸಹೋದರರನ್ನು ನೇಮಿಸಿದನು. ಆದರೆ ಇವನ ಸಹೋದರರು ಕಷ್ಟದ ಸಮಯದಲ್ಲಿ ಅಸಹಕಾರರನ್ನು ತೋರಿಸಿದರು. ಕಾಮ್ರಾನನು ಹುಮಾಯೂನನ್ನು ಬಂದಿಸಲು ಆದೇಶ ಹೊರಡಿಸಿದ್ದರಿಂದ ಈತನು ಪರ್ಶಿಯಾಕ್ಕೆ ಪಲಾಯನ ಮಾಡಬೇಕಾಯಿತು. ಈ ರೀತಿ ಸಹೋದರರ ಅವಿಶ್ವಾಸಗಳು ಕೂಡ ಇವನ ವಿಫಲತೆಗೆ ಕಾರಣವಾಯಿತು.

5. ಶೇರಖಾನನ ಸಾಮಾರ್ಥ್ಯ ;- ಸಸರಾಮದ ಚಿಕ್ಕ ಜಹಗೀರುದಾರ ಶೇರಖಾನ ಅತ್ಯಂತ ಚಾಣಕ್ಷ ಮತ್ತು ಚತುರ ರಾಜಕೀಯ ಮುತ್ಸದ್ಧಿಯಾಗಿದ್ದನು. ಇವನು ಬಹುಬೇಗನೆ ಬೆಳದು ಚುನಾರಕೋಟೆಯ ಒಡೆಯನಾಗಿದ್ದನು. ಅಪಾರ ಪ್ರಮಾಣದ ಗುಪ್ತನಿಧಿ ದೊರೆತ್ತಿದ್ದರಿಂದ ದೊಡ್ಡ ಸೈನ್ಯವನ್ನು ಸಂಘಟಿಸಲಾರಂಬಿಸಿದನು. ಮೊಘಲರ ಸೇವೆಯಲ್ಲಿದ್ದು ಸೈನ್ಯದ ಬಲ ಮತ್ತು ದುರ್ಬಲಗಳನ್ನು ಚನ್ನಾಗಿ ಅರಿತವನಾಗಿದ್ದನು. ಮೊಘಲರ ಸೈನ್ಯವನ್ನು ಸೋಲಿಸಬೇಕಾದರೆ ಅವರಂತೆ ಬಲಯುತವಾದ ಫಿರಂಗಿ ಪಡೆಯನ್ನು ಕಟ್ಟುವದರಲ್ಲಿ ನಿರತನಾಗಿದ್ದನು.

**6. ಹುಮಾಯೂನನ ತಪ್ಪುಗಳು. ;-** ಹುಮಾಯೂನ ವೀರಪರಾಕ್ರಮಿಯಾಗದ್ದನೇ ಹೊರತು ಮುತ್ಸದ್ಧಿಯಾಗಿರಲಿಲ್ಲ, ವೈರಿಗಳನ್ನು ಸಂಪೂರ್ಣವಾಗಿ ಸೋಲಿಸದೇ ಅರ್ದಕ್ಕೆ ನಿಲ್ಲಿಸುತ್ತಿದ್ದನು. ಅವರೊಡನೆ ಶಾಂತಿ ಒಪ್ಪಂದ ಮಾಡುಕೊಳ್ಳುತ್ತಿದ್ದದ್ದು ಅವನ ಪ್ರಮಾದವಾಗಿತ್ತು ಕಾಲಿಂಜರದ ರಾಜಾಪ್ರತಾಪ ದೇವನನ್ನು ಸಂಪೂರ್ಣವಾಗಿ ಸೋಲಿಸದೇ ಒಪ್ಪಂದ ಮಾಡಿಕೊಂಡದ್ದು.

ಚುನಾಕೋಟೆ ಮೊದಲ ದಂಡಯಾತ್ರೆಯಲ್ಲಿ ಶೇರಖಾನನ ನಾಟಿಕೀಯ ಶರಣಾಗತಿ ಒಪ್ಪಿಕೊಂಡು ಅವನನ್ನು ಸಂಪೂರ್ಣವಾಗಿ ಸದೇಬಡಿಯದೇ ಇದ್ದದ್ದು ರಣರಂಗದಲ್ಲಿ ವಿಲಾಸದಲ್ಲಿ ಮಗ್ನನಾಗಿ ಬಂದ ಕಾರ್ಯ ಮರೆಯುವದು.

ಗೌರಕೋಟೆಯಲ್ಲಿ ಮದ್ಯ ಮತ್ತು ಮದನಿಯರ ಜೋತೆ 8 ತಿಂಗಳು ಕಾಲಹರಣ ಮಾಡಿದ್ದು

ತನ್ನ ಸಹೋದರಿಗೆ ಸಾಮ್ರಾಜ್ಯದ ವಿವಿಧ ಭಾಗದ ಆಡಳಿತವನ್ನು ಒಪ್ಪಿಸಿದ್ದು

ಸಹೋದರರ ತಪ್ಪುಗಳನ್ನು ಮನ್ನಿಸಿದ್ದು

ಹೀಗೆ ಹುಮಾಯೂನನು ಮಾಡಿದ ಹಲವಾರು ತಪ್ಪುಗಳಿಂದಾಗಿ ಇವನ ವಿಫಲತೆಗೆ ಕಾರಣವಾಯಿತು.

ರಾಜಬ್ರಷ್ಟನಾಗಿ ಅಲೇಮಾರು ಜೀವನ.

ಹುಮಾಯೂನ ಲಾಹೋರ ತಲುಪಿದ ಮೇಲೆ ತನ್ನೆಲ್ಲಾ ಸಹೋದರರ, ಬಂದುಗಳ ಮತ್ತು ಸರದಾರರ ಸಭೆಯನ್ನು ಕರೆದು ಶೇರಖಾನನನ್ನು ಎದುರಿಸಲು ಸಹಕಾರ ಕೋರಿದನು. ಆದರೆ ಅವನ ಸಹೋದರರು ಇವನ ಸಲಹೆಗಳನ್ನು ತಿರಸ್ಕರಿಸಿದರು. ಇದರಿಂದ ಹತಾಶನಾದ ಹುಮಾಯೂನನು ಸಿಂಧ್ ಪ್ರಾಂತವನ್ನು ಸೇರಿ ಅಲ್ಲಿಯ ಶಹಹುಸೇನ್ ಆಫಘನ್‌ನ ಸಹಾಯ ಕೋರಿದನು. ಅಲ್ಲಿಯೂ ನಿರಾಸೆ ಕಾದಿತ್ತು. ಮುಂದೆ ಪತಾರ ಕೋಟೆಯನ್ನು ಸೇರಿ ಅಲ್ಲಿ ಹಮೀದಾ ಬಾನು ಬೇಗಂಳನ್ನು ಮದುವೆಯಾದನು. ಅಪಾರ ಸಂಪತ್ತಿನ ಒಡೆಯನಾದನು. ಇದರಿಂದ ಅವನ ಸಹೋದರರು ಸಂಪತ್ತಿನ ಆಸೆಗೆಗಾಗಿ ಹುಮಾಯೂನನ ಬೆನ್ನಟ್ಟಿದನು. ಇವರಿಂದ

ತಪ್ಪಿಸಿಕೊಂಡು ಅಮರಕೋಟೆಯನ್ನು ಸೇರಿದನು. ಅಲ್ಲಿಯ ಅರಸ ರಾಜಾ ಪ್ರಸಾದ ದೇವನು ಇವರಿಗೆ ಆಶ್ರಯ ನೀಡಿದನು. ಇಲ್ಲಿ ಅಕ್ಬರನ ಜನನವಾಯಿತು.

**ಪರ್ಶಿಯಾಕ್ಕೆ ಪಲಾಯನ**

ಹುಮಾಯೂನನ ಆತ್ಮೀಯ ಮಿತ್ರ ಮತ್ತು ಅವನ ದಂಡನಾಯಕನಾದ ಭೈರಾಮಖಾನ ಶೇರಖಾನನ ಸರೆಮನೆಯಿಂದ ತಪ್ಪಿಸಿಕೊಂಡು ಅಮರಕೋಟೆಯನ್ನು ಸೇರಿದನು. ಕಾಮ್ರಾನನು ಹುಮಾಯೂನನ್ನು ಕಂಡಲ್ಲಿ ಬಂದಿಸಲು ಆದೇಶವಿತ್ತನು. ಈ ಒತ್ತಡದಿಂದ ಪಾರಾಗಲು ತನ್ನ ಮಗ ಅಕ್ಬರ ಚಿಕ್ಕ ಶೀಶುವನ್ನು ಮಹಾಮಂಗ ಎಂಬ ದಾದಿಗೆ ಸಾಕಲು ಒಪ್ಪಿಸಿ, ತನ್ನ ಮಡದಿ ಮತ್ತು ಭೈರಾಮ ಖಾನನ ಜೋತೆ ಪರ್ಶಿಯಾಕ್ಕೆ ಪಲಾಯನ ಮಾಡಿದನು.

ಪರ್ಶಿಯಾದ ಚಕ್ರವರ್ತಿ ಷಹಾ ತಮಾಷ ಜೋತೆ ಮೈತ್ರಿ ಮಾಡಿಕೊಂಡು ಸಹಾಯ ಕೋರಿದನು. ಕೆಲವು ಷರತ್ತುಗಳೊಂದಿಗೆ ಸಹಾಯ ಮಾಡಲು ಒಪ್ಪಂದ ಮಾಡಿಕೊಂಡನು.

1.) 14000 ಅಶ್ವಪಡೆಯನ್ನು ಕೊಡಲು ಒಪ್ಪದನು.

2.) ಬದಲಿಗೆ ಕಂದಹಾರ, ಕಾಬೂಲ, ಲಾಹೋರ ಗೆದ್ದ ಮೇಲೆ ಕಮದಹಾರನ್ನು ಚಕ್ರವರ್ತಿಗೆ ಒಪ್ಪಿಸಬೇಕು.

3.) ಶಿಯಾ ಧರ್ಮವನ್ನು ಸ್ವೀಕರಿಸಬೇಕು ಮತ್ತು ಭಾರತದಲ್ಲಿ ಶಿಯಾ ಧರ್ಮವನ್ನು ಪ್ರಸಾರ ಮಾಡಬೇಕು.

ಭಾರತದ ಸಾಮ್ರಾಜ್ಯದ ಪುನಃರ ಸಂಪಾದನೆ.

ಕ್ರಿ. ಶ. 1545 ರಲ್ಲಿ ಪರ್ಶಿಯಾದಿಂದ ಹೊರಟು ಕಂದಹಾರ ಮೇಲೆ ದಾಳಿ ಮಾಡಿದನು. ಅಲ್ಲಿ ಅಸ್ಕಾರಿಯನ್ನು ಸೋಲಿಸಿ ಕಂದಹಾರನ್ನು ವಶಪಡಿಸಿಕೊಂಡನು.

ನಂತರದಲ್ಲಿ ಕಾಬೂಲಿನ ಮೇಲೆ ಮತ್ತು ಲಾಹೋರ ಮೇಲೆ ದಾಳಿ ಮಾಡಿ ವಶಪಡಿಕೊಂಡನು. ತನ್ನ ಸಹೋದರರನ್ನು ಕೊಂದು ತನ್ನ ಸ್ಥಾನ ಭದ್ರಪಡಿಕೊಂಡನು ಪರ್ಶಿಯಾದ ಚಕ್ರವರ್ತಿಗೆ ಕಂದಹಾರನ್ನು ಒಪ್ಪಿಸಿ, ಇನ್ನಷ್ಟು ಸೈನ್ಯವನ್ನು ಅವನಿಂದ ಪಡೆದು ಭಾರತದ ಮೇಲೆ ದಾಳಿ ಮಾಡಿದನು.

ಆಗ ಭಾರತದಲ್ಲಿ ಶೇರಖಾನ ಮರಣ ಹೊಂದಿದ್ದನು. ಇದರಿಂದ ಅಫಘನರಲ್ಲಿ ಐಕ್ಯತೆ ಒಡೆದಿತ್ತು ಸಿಕಂದರ ಸೂರನು ಅಫಘನರ ನಾಯಕನಾಗಿದ್ದನು. ಕ್ರಿ. ಶ 1554 ರಲ್ಲಿ ಮಛೀವರ್ ಎಂಬಲ್ಲಿ ಮತ್ತು ಕ್ರಿ. ಶ 1555 ರಲ್ಲಿ ಸರ್‌ಹಿಂದದಲ್ಲಿ ಎರಡು ಬಣಗಳ ಮಧ್ಯ ನಡೆದ ಯುದ್ಧದಲ್ಲಿ ಸಿಕಂದರ ಸೂರನು ಸೋತು ಪಲಾಯನ ಮಾಡಿದನು. ಭಾರತದ ದೆಹಲಿ ಸಾಮ್ರಾಜ್ಯ ಹುಮಾಯೂನನ ವಶವಾಯಿತು.

**ಕೊನೆಯದಿನಗಳು ಮತ್ತು ಮರಣ.**

ಹುಮಾಯೂನನ ಸೈನಿಕರು ಈ ವಿಜಯೂತ್ಸವವನ್ನು ಸಂಭ್ರಮ ಮತ್ತು ಸಡಗರದಿಂದ ಆಚಾರಿಸಿದರು. ಭಾದಷಹನ ಹೆಸರಿನಲ್ಲಿ ಖುತುಬಾವನ್ನು ಓದಿಸಿ, ನಾಣ್ಯಗಳನ್ನು ಟಂಕಿಸಲಾಯಿತು. ಈ ವಿಜಯದ ನಂತರ ಹುಮಾಯೂನನು ಬಹಳ ಕಾಲ ಬದುಕಲಿಲ್ಲ, ಕ್ರಿ. ಶ. 1556 ಜನೇವರಿ 24 ರಂದು ತನ್ನ ಗ್ರಂಥಾಲಯದ ಮೆಟ್ಟಲಿಳಿಯುವಾಗ ಕಾಲು ಜಾರಿ ಬಿದ್ದು ಪೆಟ್ಟನಿಂದ ಹಾಸಿಗೆ ಹಿಡಿದನು. ಇದೇ ನೊವಿನಲ್ಲಿ ಎರಡು ದಿನಗಳ ನಂತರ ಜನೇವರಿ 26 ರಂದು ಮರಣ ಹೊಂದಿದನು.

**ವ್ಯಕ್ತಿತ್ವ ಮತ್ತು ವಿಮರ್ಶೆ.**

ಲೇನ್ ಪೂಲ್ ;- “ಹುಮಾಯೂನನ ವ್ಯಕ್ತಿತ್ವವು ನಮ್ಮನ್ನು ಆಕರ್ಷಿಸುತ್ತದೆ, ಆದರೆ ಅದು ನಮ್ಮ ಮೇಲೆ ಪ್ರಭಾವ ಬೀರುವದಿಲ್ಲ ”

ಹುಮಾಯೂನ್ ಎಂದರೆ ಅದೃಷ್ಠಶಾಲಿ ಎಂದರ್ಥ ಆದರೆ ಅವನಂತಹ ದುರ್ದೈವಿ ದೊರೆ ಬೇರೊಬ್ಬರಿಲ್ಲ.

ಬೀಳುವ ಸಾದ್ಯತೆ ಇದ್ದರೆ, ಹುಮಾಯೂನ್ ಅದನ್ನೆಂದು ತಪ್ಪಿಸಿಕೊಳ್ಳುತ್ತಿರಲಿಲ್ಲ, ಈತನು ತನ್ನ ಜೀವಮಾನದುದ್ದಕ್ಕೂ ಮುಗ್ಗರಿಸಿದನು. ಕೊನೆಗೆ ಜೀವನದಿಂದಲೇ ಮುಗ್ಗರಿಸಿದನು.